‘ಈಗ ನಾನು, ನೀವು ಕೊಟ್ಟ ಸ್ವಾತಂತ್ರ್ಯವನ್ನು ತಪ್ಪಾಗಿ ಲಾಭ ಪಡೆದೆ ಎಂದು ಹೇಳಬಾರದು’. ನಾನು ಸಹ ಅಮ್ಮನ ಆಧುನಿಕತೆಗೆ ಚಾಲೆಂಜ್ ಮಾಡುತ್ತಾ ಹೇಳಿದೆ.

‘ವಿಷಯವಂತೂ ನಿಜ, ಅದು ಕಂದಾಚಾರವೇ ಆಗಿರಲಿ, ಆದ್ರೆ ನಾನು ಹೇಳೇ ಹೇಳ್ತೀನಿ’, ಅಮ್ಮ ತನ್ನ ಪ್ರಯತ್ನವನ್ನು ಬಿಡಲು ಬಯಸುತ್ತಿರಲಿಲ್ಲ.

‘ಪ್ಲೀಸ್ ಅಮ್ಮಾ! ಫಾರ್ ಗಾಡ್ ಸೇಕ್, ನಾನು ನನ್ನ ಜೀವನವನ್ನು ನನ್ನದೇ ಆದ ವಿಧಾನದಿಂದ ಸಾಗಿಸಲು ಬಯಸುತ್ತೇನೆ, ನಿಮ್ಮ ಹಾಗೆ’. ನಾನು ಅಮ್ಮನಿಗೆ ಅವರ ಸ್ವಾತಂತ್ರ್ಯವನ್ನು ನೆನಪು ಮಾಡಿದೆ.

ವೈವಾಹಿಕ ಜೀವನದ ಬಂಧನದಲ್ಲಿ ಅನೇಕ ವರ್ಷಗಳು ಪತಿಪತ್ನಿಯಾಗಿದ್ದು ನನಗೆ ಮತ್ತು ನನ್ನ ಸಹೋದರನಿಗೆ ಜನ್ಮ ಕೊಟ್ಟ ನಂತರವೂ, ಅಮ್ಮ ಸಹ ನನ್ನ ಅಪ್ಪನೊಂದಿಗೆ ಬೇರೆ ಇರುವ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದ್ದರು. ಅಮ್ಮ ವಿವಾಹಿತೆಯಾಗಿದ್ದಾಗ್ಯೂ ವೈಚಾರಿಕ ನೆಲೆಯಲ್ಲಿ ಸದಾ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರು. ಈಗ ಅವರು ನನಗೆ ಉಪದೇಶ ಕೊಡುತ್ತಿದ್ದಾರೆ, ಇದು ನನಗೆ ಒಪ್ಪಿಗೆಯಿರಲಿಲ್ಲ. ತಾವು ಪ್ರತ್ಯೇಕವಾಗಿರುವ ವಿಷಯ ಬಂದ ಕೂಡಲೇ ಅಮ್ಮನ ಮುಖದಲ್ಲಿ ಬೇಸರ ಮೂಡಿತು.

‘ಸುಗಂಧಾ, ಅದು ಬೇರೆ ವಿಷಯವಾಗಿತ್ತು. ಅದರೊಂದಿಗೆ ನಿನ್ನ ಜೀವನವನ್ನು ಅಳೆಯಲು ಪ್ರಯತ್ನಿಸಬೇಡ’, ಅಮ್ಮನ ಧ್ವನಿ ಕೋಮಲವಾಯಿತು.

‘ಬೇರೆ ವಿಷಯ ಹೇಗಾಗುತ್ತೆ ಅಮ್ಮಾ? ನೀವು ಅಪ್ಪನನ್ನು ತ್ಯಜಿಸಿದಿರಿ, ಇನ್ನೊಬ್ಬರನ್ನು ಒಪ್ಪಿಕೊಳ್ಳಲು ಪ್ರಯತ್ನಿಸಿದಿರಿ, ಆದರೆ ಅವರೆಂದೂ ನಿಮ್ಮವರಾಗಿ ಇರದಾದರು. ನಾನು ಈ ಎಲ್ಲವನ್ನೂ ಸಮಸ್ಯೆ ಮಾಡಲು ಬಯಸಲ್ಲ. ನಾನು ಯಾರನ್ನೇ ಬಿಡಲು ಅಥವಾ ಯಾರನ್ನೇ ಪಡೆಯಲು ಸ್ವತಂತ್ರಳಾಗಿರುತ್ತೇನೆ’. ನಾನು ನನ್ನ ಮಾತನ್ನು ತಾರ್ಕಿಕಗೊಳಿಸುತ್ತಾ ಹೇಳಿದೆ. ಇದು ನಿಜವೂ ಆಗಿತ್ತು. ನಾನು ಪರೋಕ್ಷವಾಗಿ ಅಮ್ಮನಿಗೆ ಸೆಲಟ್ ಅಂಕಲ್‌ರನ್ನು ನೆನಪಿಸಿದ್ದೆ.

‘ಇದು ಸರಿಯಲ್ಲ, ಸುಗಂಧಾ’ ಅಮ್ಮ ದಣಿದ ಸ್ವರದಲ್ಲಿ ಹೇಳಿದರು, ‘ಒಂದ್ಸಲ ನನಗೆ ಆ ಹುಡುಗನನ್ನು ಭೇಟಿ ಮಾಡಿಸು’.

‘ಅವನ ಹೆಸರು ರಿತಿಕ್ ಶರ್ಮಾ. ಅಮ್ಮಾ, ನೀವು ಅವನನ್ನು ಭೇಟಿಯೂ ಆಗಿದ್ದೀರ, ನಮ್ಮ ಮದುವೆಯ ಬಗ್ಗೆ ಮಾತನಾಡಲು ಅವನ ಅಪ್ಪ ಸಹ ಬಂದಿದ್ದರು. ಆದರೆ ನಾವು ಅವರ ಮಾತನ್ನು ತಿರಸ್ಕರಿಸಿದೆವು.’

‘ಅವನ ಅಪ್ಪ ಬಂದಿದ್ದರು? ಅವರು ನಿಮ್ಮಿಬ್ಬರ ಮದುವೆಗೆ ಸಿದ್ಧರಾಗಿದ್ದರು? ನೀನು ಅವರ ಮಾತನ್ನು ತಿರಸ್ಕರಿಸಿದೆ? ಅಯ್ಯೋ ದೇವರೇ’, ಅಮ್ಮನಿಗೆ ಆಶ್ಚರ್ಯವಾಯಿತು.

‘ಹೌದಮ್ಮ! ಇದು ನಮ್ಮ ಜೀವನ, ನಮ್ಮ ತೀರ್ಮಾನ. ವಿಶೇಷವಾಗಿ ನನ್ನ ತೀರ್ಮಾನ. ನಾನು ಯಾವುದೇ ಬಂಧನದಲ್ಲಿರಲು ಬಯಸಲ್ಲ’. ನಾನು ನನ್ನ ಕೊನೆಯ ತೀರ್ಮಾನವನ್ನು ತಿಳಿಸುತ್ತಾ ಹೇಳಿದೆ.

‘ಸರಿ, ನಿನ್ನಿಷ್ಟ. ಆದರೂ ನೆನಪಿಟ್ಟುಕೋ, ನಮ್ಮ ಸಮಾಜ ಈಗಲೂ ಹಳೆಯ ಪರಂಪರೆಗಳನ್ನು ಬಲವಾಗಿ ಪೋಷಿಸುತ್ತಿದೆ, ಅದು ನಿನ್ನನ್ನು ನೆಮ್ಮದಿಯಿಂದ ಇರಲು ಬಿಡಲ್ಲ’. ಅಮ್ಮ ಹೇಳಿದ್ದರು.

‘ಅಮ್ಮಾ, ನೀನು ಸಿಟ್ಟಿನಲ್ಲಿ ಶಾಪ ಕೊಡ್ತಿದ್ದೀಯೋ ಅಥವಾ ತಿಳಿವಳಿಕೆ ಹೇಳ್ತಿದ್ದೀಯೋ?’ ನಾನು ಉದ್ದಂಡತನದಿಂದ ಹೇಳಿದೆ. ನಾನು ಅಮ್ಮನೊಂದಿಗೆ ಹೀಗೆ ಮಾತನಾಡಬಾರದಿತ್ತು, ಆದರೆ ಮಾತನಾಡಿದೆ. ಆಗ ನನ್ನೊಳಗೆ ಅಡಗಿದ್ದ ವಿದ್ರೋಹದ, ಬಂಡಾಯದ ಭಾವನೆ ಉಕ್ಕಿ ಉಕ್ಕಿ ಹೊರಗೆ ಬರುತ್ತಿತ್ತು; ನಾನು ಆ ತಾಪದಲ್ಲಿ ಮಾತನಾಡುತ್ತಲೇ ಇದ್ದೆ. ನನಗೆ ಅಮ್ಮನೊಂದಿಗೆ ವೈರತ್ವವಿರಲಿಲ್ಲ, ವಿದ್ರೋಹದ ಮಾತೂ ಇರಲಿಲ್ಲ. ಆದರೆ ಅವರು ನನ್ನ ಗುರಿಯಾದರು.

‘ನಿನಗೆ ಶಾಪ ಕೊಡುವ ಬಗ್ಗೆ ನಾನು ಕನಸಿನಲ್ಲೂ ಯೋಚಿಸಲ್ಲ, ಯೋಚಿಸಲು ಸಾಧ್ಯವೂ ಇಲ್ಲ. ನಾನು ನಿನಗೆ ಜಗತ್ತಿನ ರೀತಿನೀತಿಯನ್ನು ತಿಳಿಯಪಡಿಸಲು ಬಯಸುತ್ತಿದ್ದೆ, ನೀನು ಈಗಿರುವಂತೆಯೇ ಸಂತೋಷದಲ್ಲಿದ್ದರೆ ಹೀಗೆಯೇ ಇರು. ನೀನು ಹೇಗಿದ್ದರೂ, ಸದಾ ನನ್ನ ಮಗಳೇ’. ಈಗ ಅವರ ಧ್ವನಿಯಲ್ಲಿ ಎಚ್ಚರಿಕೆ ಇರಲಿಲ್ಲ, ಮಮತೆಯಿತ್ತು. ಆದರೆ ಆಗಿನ ಅವರ ಮಾತುಗಳು ನನಗೆ ಮಹತ್ವದ್ದಾಗಿರಲಿಲ್ಲ.

ಈ ಬಾರಿ ಅಮ್ಮ ನನ್ನ ಬೆರಳು ಹಿಡಿದು ನನ್ನನ್ನು ನಡೆಸದಾದಳು. ನಾನೀಗ ದೊಡ್ಡವಳಾಗಿದ್ದೆ. ಇಪ್ಪತ್ತೆಂಟರ ವಯಸ್ಸು ಕಡಿಮೆಯೇನಲ್ಲ. ನಾನು ಪ್ರೌಢಾವಸ್ಥೆಗೆ ಕಾಲಿಡುತ್ತಿದ್ದೆ; ನನ್ನ ಜೀವನದ ಬಗ್ಗೆ ತೀರ್ಮಾನಗೊಳ್ಳುವ ಅಧಿಕಾರ ನನಗಿತ್ತು. ಆಗ ನನಗೆ, ತಂದೆತಾಯಿಗೆ ಮಕ್ಕಳು ಸದಾ ಮಕ್ಕಳೇ ಆಗಿರುತ್ತಾರೆ, ಅವರಿಗೆಷ್ಟೇ ವಯಸ್ಸಾಗಿರಲಿ, ಆದರೆ ಮಕ್ಕಳಿಗೆ ತಂದೆತಾಯಿ ಅಷ್ಟು ದೊಡ್ಡವರಾಗಿ ಉಳಿಯುವುದಿಲ್ಲ; ಮಕ್ಕಳು ಅವರ ತೀರ್ಮಾನಗಳನ್ನು ಕಣ್ಣುಮುಚ್ಚಿ ಒಪ್ಪುವುದಿಲ್ಲ.

ನನಗೆ ಅಮ್ಮನ ಮಾತುಗಳ ಮರ್ಮವನ್ನು ಅರಿಯಲು ಅನೇಕ ವಾರಗಳೇ ಹಿಡಿದವು. ವಾಸ್ತವವಾಗಿ ಅಮ್ಮ ತಮ್ಮ ಸಾಮಾಜಿಕ ಅನುಭವಗಳಿಂದ ನನ್ನನ್ನು ತಡೆಯುತ್ತಿದ್ದರು. ಅವರು ಸ್ವೇಚ್ಛೆಯಿಂದ ಬೇರೆಯಾಗಿದ್ದರು. ಅಮ್ಮನೊಂದಿಗೆ ಅಪ್ಪ ಯೋಗ್ಯವಾಗಿ ನಡೆದುಕೊಳ್ಳುತ್ತಿರಲಿಲ್ಲ. ಹೊಡೆತ ನಿಂದನೆ, ಬೇರೆ ಹೆಣ್ಣುಗಳೊಂದಿಗೆ ಸಂಪರ್ಕ ಅವರಿಗೆ ಸಾಮಾನ್ಯ ಸಂಗತಿಗಳಾಗಿದ್ದವು. ಅಮ್ಮ ವಿದ್ಯಾವಂತರಾಗಿದ್ದರು, ಅವರು ಕೊರಗಿಕೊರಗಿ ಜೀವನ ಸವೆಸಲು ಬಯಸುತ್ತಿರಲಿಲ್ಲ. ಅವರಿಗೆ ಅಪ್ಪನೊಂದಿಗೆ ಜೀವನ

